ಸಂಪುಟ 01 | ಸಂಚಿಕೆ 140 | ಭಾನುವಾರ 26 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ಕಾರ್ಗಿಲ್ ವಿಜಯ್ ದಿವಸ್ (Kargil Vijay Diwas)**
ಪ್ರತಿ ವರ್ಷ ಜುಲೈ 26 ರಂದು ಭಾರತವು ಕಾರ್ಗಿಲ್ ವಿಜಯ್ ದಿವಸ್ ಅನ್ನು ಆಚರಿಸುತ್ತದೆ. 1999ರ ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಸಾಧಿಸಿದ ಐತಿಹಾಸಿಕ ವಿಜಯವನ್ನು ಸ್ಮರಿಸುವ ದಿನ ಇದಾಗಿದೆ. ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ವೀರ ಯೋಧರಿಗೆ ಈ ದಿನ ಗೌರವ ಸಲ್ಲಿಸಲಾಗುತ್ತದೆ.

**2. ಅಂತರರಾಷ್ಟ್ರೀಯ ಮ್ಯಾಂಗ್ರೋವ್ ಪರಿಸರ ವ್ಯವಸ್ಥೆ ಸಂರಕ್ಷಣಾ ದಿನ ??**
ಕರಾವಳಿ ಪ್ರದೇಶಗಳನ್ನು ರಕ್ಷಿಸುವ, ಜೀವ ವೈವಿಧ್ಯತೆಯನ್ನು ಉಳಿಸುವ ಹಾಗೂ ಹವಾಮಾನ ಬದಲಾವಣೆಯ ಪರಿಣಾಮವನ್ನು ಕಡಿಮೆ ಮಾಡುವ ಮ್ಯಾಂಗ್ರೋವ್ ಕಾಡುಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ.

**3. ವಿಶ್ವ ಟೋಫು ದಿನ (World Tofu Day) ??**
ಟೋಫು ಎಂಬ ಆರೋಗ್ಯಕರ ಮತ್ತು ಪೌಷ್ಟಿಕ ಆಹಾರದ ಮಹತ್ವವನ್ನು ಜನರಿಗೆ ತಿಳಿಸಲು ಹಾಗೂ ಆರೋಗ್ಯಕರ ಆಹಾರ ಪದ್ಧತಿಯನ್ನು ಉತ್ತೇಜಿಸಲು ಈ ದಿನವನ್ನು ಆಚರಿಸಲಾಗುತ್ತದೆ.

**4. ಎಸ್ಪೆರಾಂಟೊ ದಿನ (Esperanto Day) ??**
ವಿಶ್ವದ ಜನರ ನಡುವೆ ಭಾಷಾ ಸೌಹಾರ್ದತೆ ಮತ್ತು ಸಂವಹನವನ್ನು ಬೆಳೆಸುವ ಉದ್ದೇಶದಿಂದ ರೂಪಿಸಲಾದ ಎಸ್ಪೆರಾಂಟೊ ಭಾಷೆಯನ್ನು ಸ್ಮರಿಸಿ ಈ ದಿನವನ್ನು ಆಚರಿಸಲಾಗುತ್ತದೆ.

**5. ವಿಶ್ವ ಅಜ್ಜ-ಅಜ್ಜಿ ಮತ್ತು ಹಿರಿಯರ ದಿನ (World Day for Grandparents and the Elderly ? 2026) ????**
2026ರಲ್ಲಿ ಜುಲೈ 26 ರಂದು ಆಚರಿಸಲಾಗುವ ಈ ದಿನವು ಅಜ್ಜ-ಅಜ್ಜಿ ಹಾಗೂ ಹಿರಿಯರ ಕೊಡುಗೆ, ಅನುಭವ ಮತ್ತು ಕುಟುಂಬ ಹಾಗೂ ಸಮಾಜದಲ್ಲಿ ಅವರ ಮಹತ್ವವನ್ನು ಗೌರವಿಸುವ ಉದ್ದೇಶ ಹೊಂದಿದೆ.

## ಸುಭಾಷಿತ

ನಮ್ಮ ಅಂತರಂಗದ ಪುಸ್ತಕ
ತೆರೆಯುವ ತನಕ ಉಳಿದೆಲ್ಲಾ
ಪುಸ್ತಕಗಳು ನಿಷ್ಪ್ರಯೋಜಕ

-ಸ್ವಾಮಿ ವಿವೇಕಾನಂದ




# ಡೆಂಗ್ಯೂ ಮುಕ್ತ ಸಮಾಜ ನಿರ್ಮಾಣಕ್ಕೆ ನರ್ಸಿಂಗ್ & ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಆರೋಗ್ಯ ರಾಯಭಾರಿಗಳಾಗಬೇಕು: BEHOಬಾಲಪ್ಪನಾಯಕ್

o ನೈಜ್ಯ ದೇಸೆ ನ್ಯೂಸ್

**ಸಿಂಧನೂರು: ಸಿಂಧನೂರು ನಗರದ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜು ವತಿಯಿಂದ ಪ್ರತೀ ಶನಿವಾರದಂತೆ ಆಯೋಜಿಸಲಾಗುವ ವಿಶೇಷ ಉಪನ್ಯಾಸ ಕಾರ್ಯಕ್ರಮವು ದಿನಾಂಕ 25 ಜುಲೈ 2026, ಶನಿವಾರದಂದು ಅರ್ಥಪೂರ್ಣವಾಗಿ ನಡೆಯಿತು.**

ಈ ವಾರದ ವಿಶೇಷ ಅತಿಥಿಯಾಗಿ ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ ಬ್ಲಾಕ್ ಆರೋಗ್ಯ ಶಿಕ್ಷಣಾಧಿಕಾರಿ (BEHO) ಶ್ರೀ ಬಾಲಪ್ಪ ನಾಯಕ್ ಅವರು ಆಗಮಿಸಿ "ಡೆಂಗ್ಯೂ ಜಾಗೃತಿ ಮತ್ತು ತಡೆಗಟ್ಟುವಿಕೆ" ಎಂಬ ವಿಷಯದ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಹಾಗೂ ಪ್ರಾಯೋಗಿಕ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಬಾಲಪ್ಪ ನಾಯಕ್ ಅವರು, ಇತ್ತೀಚಿನ ದಿನಗಳಲ್ಲಿ ಮಳೆಗಾಲ ಆರಂಭವಾಗಿರುವುದರಿಂದ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇರುವುದ-ರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಇರಬೇಕು ಎಂದು ತಿಳಿಸಿದರು. ಡೆಂಗ್ಯೂ ಎನ್ನುವುದು ಸಾಮಾನ್ಯ ಜ್ವರವಲ್ಲ, ಇದು ನಿರ್ಲಕ್ಷಿಸಿದರೆ ಜೀವಕ್ಕೆ ಅಪಾಯ ಉಂಟುಮಾಡುವ ಗಂಭೀರ ವೈರಸ್ ಸೋಂಕಾಗಿದ್ದು, ಸಾರ್ವಜನಿಕರ ಜಾಗೃತಿಯೇ ಇದನ್ನು ತಡೆಗಟ್ಟುವ ಪ್ರಮುಖ ಅಸ್ತ್ರವಾಗಿದೆ ಎಂದು ಹೇಳಿದರು.ಅವರು ವಿವರಿಸಿದಂತೆ, ಡೆಂಗ್ಯೂ ವೈರಸ್ "ಏಡಿಸ್ ಈಜಿಪ್ಟೈ" (ಂಜಜಝ ಚಿಜಂಥಿಠಿಣು) ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಹರಡುತ್ತದೆ.

ಈ ಸೊಳ್ಳೆಗಳು ಹೆಚ್ಚಾಗಿ ಬೆಳಗಿನ ಹಾಗೂ ಸಂಜೆ ವೇಳೆಯಲ್ಲಿ ಕಚ್ಚುತ್ತವೆ. ಮನೆಯ ಸುತ್ತಮುತ್ತ ಸ್ವಚ್ಛತೆ ಇಲ್ಲದಿರುವುದು, ಹಳೆಯ ಟೈರುಗಳು, ತೆರೆದ ನೀರಿನ ಟ್ಯಾಂಕ್‌ಗಳು, ಹೂವಿನ ಕುಂಡಿಗಳು, ತೆಂಗಿನ ಚಿಪ್ಪುಗಳು, ಪ್ಲಾಸ್ಟಿಕ್ ಪಾತ್ರೆಗಳು ಹಾಗೂ ಮಳೆನೀರು ನಿಂತಿ-ರುವ ಯಾವುದೇ ಸ್ಥಳಗಳಲ್ಲಿ ಈ ಸೊಳ್ಳೆಗಳು ಸಂತಾನೋತ್ಪತ್ತಿ ಮಾಡುತ್ತವೆ ಎಂದು ತಿಳಿಸಿದರು. ಅವರು ವಿದ್ಯಾರ್ಥಿಗಳಿಗೆ ಡೆಂಗ್ಯೂನ ಪ್ರಮುಖ ಲಕ್ಷಣಗಳ ಕುರಿತು ಮಾಹಿತಿ ನೀಡುತ್ತಾ, ತೀವ್ರ ಜ್ವರ, ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ದೇಹ ಮತ್ತು ಕೀಲು ನೋವು, ವಾಂತಿ, ಚರ್ಮದ ಮೇಲೆ ಕೆಂಪು ಕಲೆಗಳು ಹಾಗೂ ತೀವ್ರ ದೌರ್ಬಲ್ಯ ಕಂಡುಬಂದರೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು ಎಂದು ಸಲಹೆ ನೀಡಿದರು.

ಸ್ವಯಂ ಔಷಧಿ ಸೇವಿಸುವುದನ್ನು ತಪ್ಪಿಸಿ, ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆಯುವುದು ಅತ್ಯಗತ್ಯ ಎಂದು ತಿಳಿಸಿದರು. ಡೆಂಗ್ಯೂ ತಡೆಗಟ್ಟಲು ಅನುಸರಿಸಬೇಕಾದ ಪ್ರಮುಖ ಕ್ರಮಗಳು:- ಮನೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಯಾವಾಗಲೂ ಸ್ವಚ್ಛವಾಗಿಡಬೇಕು- ನೀರು ನಿಲ್ಲುವ ಎಲ್ಲ ಸ್ಥಳಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಬೇಕು- ನೀರಿನ ಟ್ಯಾಂಕ್ ಹಾಗೂ ಪಾತ್ರೆಗಳನ್ನು ಮುಚ್ಚಿಡಬೇಕು- ಸಂಪೂರ್ಣ ತೋಳಿನ ಬಟ್ಟೆ ಧರಿಸಿ ಸೊಳ್ಳೆ ಕಚ್ಚದಂತೆ ಮುನ್ನೆಚ್ಚ-ರಿಕೆ ವಹಿಸಬೇಕು- ಸೊಳ್ಳೆ ಪರದೆ, ಮಸ್ಕಿಟೋ ನೆಟ್ ಹಾಗೂ ಸೊಳ್ಳೆ ನಿವಾರಕಗಳನ್ನು ಬಳಸಬೇಕು- ಆರೋಗ್ಯ ಇಲಾಖೆ ಸಿಬ್ಬಂದಿ



ನಡೆಸುವ ಫಾಗಿಂಗ್ ಹಾಗೂ ಲಾರ್ವಾ ನಾಶಕ ಕಾರ್ಯಗಳಿಗೆ ಸಾರ್ವಜನಿಕರು ಸಹಕರಿಸಬೇಕು- ಪ್ರತಿಯೊಬ್ಬ ನಾಗರಿಕರೂ ತಮ್ಮ ಮನೆ ಮಾತ್ರವಲ್ಲದೆ ತಮ್ಮ ಸುತ್ತಮುತ್ತಲಿನ ಪ್ರದೇಶವೂ ಸ್ವಚ್ಛವಾಗಿರುವಂತೆ ಗಮನಹರಿಸಬೇಕು. ಬಾಲಪ್ಪ ನಾಯಕ್ ಅವರು, ಆರೋಗ್ಯ ಕ್ಷೇತ್ರದ ವಿದ್ಯಾರ್ಥಿಗಳಾದ ನರ್ಸಿಂಗ್, ಫಾರ್ಮಸಿ ಹಾಗೂ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಸಮಾಜದಲ್ಲಿ ಆರೋಗ್ಯ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು ಎಂದು ಕರೆ ನೀಡಿದರು. ಭವಿಷ್ಯದಲ್ಲಿ ನೀವು ಕೇವಲ ಆರೋಗ್ಯ ವೃತ್ತಿಪರರಲ್ಲ, ಸಮಾಜದ ಆರೋಗ್ಯ ರಾಯಭಾ-ರಿಗಳಾಗಬೇಕು. ನಿಮ್ಮ ಮೂಲಕ ಸಾವಿರಾರು ಜನರಿಗೆ ಆರೋಗ್ಯದ ಅರಿವು ಮೂಡಬಹುದು.

ಸೇವಾ ಮನೋಭಾವ, ಮಾನವೀಯತೆ ಹಾಗೂ ಜವಾಬ್ದಾ-ರಿಯೊಂದಿಗೆ ಕಾರ್ಯನಿರ್ವಹಿಸಿದರೆ ಉತ್ತಮ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಸಂದೇಶ ನೀಡಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು, ಮಳೆಗಾಲದಲ್ಲಿ ಡೆಂಗ್ಯೂ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಅತ್ಯಗತ್ಯವಾಗಿದೆ. ಇಂತಹ ಉಪನ್ಯಾಸಗಳು ವಿದ್ಯಾರ್ಥಿಗಳಲ್ಲಿ ಆರೋಗ್ಯದ ಬಗ್ಗೆ ಜ್ಞಾನ ಹಾಗೂ ಸಮಾಜದ ಬಗ್ಗೆ ಕಾಳಜಿಯನ್ನು ಹೆಚ್ಚಿಸುತ್ತವೆ ಎಂದು ಹೇಳಿದರು. ಅಮೂಲ್ಯ ಮಾಹಿತಿಯನ್ನು ಹಂಚಿಕೊಂಡ ಜವಳಗೇರಾ ಪ್ರಾಥಮಿಕ ಆರೋಗ್ಯ ಕೇಂದ್ರದ ಃಇಊಔ ಬಾಲಪ್ಪ ನಾಯಕ್ ಅವರಿಗೆ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಇರ್ಷಾದ್ ಕೆ, ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಲಾಜರ್ ಸಿರಿಲ್, ಫಾರ್ಮಸಿ ಕಾಲೇಜಿನ ಪ್ರಾಚಾರ್ಯ ವಾಸಿಂ ಹುಸೇನ್,



ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಚಕ್ರವರ್ತಿ, ಉಪನ್ಯಾಸಕರಾದ ರಾಜೇಶ್, ಅಶು ಪಾಷಾ, ಸಂತೋಷಿ, ಸುಧಾ, ವೀರೇಶ್, ಶೋಭಾ, ದಿಲೀಪ್, ಹರ್ಷಿತಾ, ಸಾಗರ್, ಚೈತ್ರ, ಸನಾ, ಸುರೇಶ್ ಯಾದವ್ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.ಕಾರ್ಯಕ್ರಮದ ಕೊನೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿ ಇರ್ಷಾದ್ ಕೆ, ಎಲ್ಲಾ ವಿಭಾಗಗಳ ಪ್ರಾಚಾರ್ಯರು ಹಾಗೂ ಉಪನ್ಯಾಸಕರ ಪರವಾಗಿ ವಿಶೇಷ ಉಪನ್ಯಾಸ ನೀಡಿದ ಃಇಊಔ ಬಾಲಪ್ಪ ನಾಯಕ್ ಅವ-ರಿಗೆ ಆತ್ಮೀಯ ಅಭಿನಂದನೆಗಳನ್ನು ಸಲ್ಲಿಸಿ, ವಿದ್ಯಾರ್ಥಿಗಳ ಆರೋಗ್ಯ ಜಾಗೃತಿಗಾಗಿ ನೀಡಿದ ಅಮೂಲ್ಯ ಮಾರ್ಗದರ್ಶನಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.








## ಮಸ್ಕಿ:ಬಿಜೆಪಿ ಪಕ್ಷದಿಂದ ಎಸ್ ಆಯ್ ಆರ್ ಮನೆ ಮನೆ ಅಭಿಯಾನ: ಪ್ರತಾಪಗೌಡ ಪಾಟೀಲ್

o ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಬಿಜೆಪಿ ಮಂಡಲ ವತಿಯಿಂದ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆ ಮಹಾ ಸಂಪರ್ಕದ ಮನೆ ಮನೆ ಅಭಿಯಾನದ ನೇತೃತ್ವವನ್ನು ಮಾಜಿ ಶಾಸಕ ಶ್ರೀ ಪ್ರತಾಪ್ ಗೌಡ ಪಾಟೀಲ್ ನಿರ್ವಹಿಸಿ ನಂತರ ಮಾತನಾಡಿ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆಗೆ ಎಲ್ಲರೂ ಸಹಕರಿಸಬೇಕು, ಮತದಾರರ ಪಟ್ಟಿ ಪರಿಷ್ಕರಿಸಿಲು ಮತ್ತು ನವೀಕರಿಸಲು ವಿಶೇಷ ಅಭಿಯಾನದ ಮುಖ್ಯ ಉದ್ದೇಶ ಅದಕ್ಕಾಗಿ ಕ್ಷೇತ್ರದ ಮತದಾರರು ಈ ಒಂದು ಅವಕಾಶ ವನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಹೇಳಿದರು.**

ಇದೇ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರಾದ ಶರಣಬಸವ



ಸೊಪ್ಪಿಮಠ, ಪಕ್ಷದ ಮುಖಂಡರಾದ ಸಿದ್ದಣ್ಣ ಹೂನಬಾವಿ, ಬಿಎಲ್ಎ-1 ಬಸವರಾಜ್ ಪಾಟೀಲ್, ಪುರಸಭೆ ಅಧ್ಯಕ್ಷರಾದ ಸುರೇಶ್ ಅರಸುರ್, ಸದಸ್ಯರಾದ ಮಲ್ಲಿಕಾರ್ಜುನ ಬ್ಯಾಳಿ, ಚೇತನ್ ಪಾಟೀಲ್ , ಮಸೂದ್ ಪಾಶ, ಡಾ. ಸಂತೋಷ್ ಪತ್ತಾರ್ , ಅಭಿಜಿತ್ ಮಾಲಿಪಾಟೀಲ್, ಗಂಗಾಧರ್ ಕಂಬಳಿ ಮಠ, ಪ್ರಶಾಂತ್ ಮುರಾರಿ, ಅಂಬ-ರೀಶ್ ಅರಸೂರ್, ಶಿವಕುಮಾರ್ ಅರಸೂರು ಇನ್ನಿತರರು ಇದ್ದರು.


ಮಸ್ಕಿ ಪಟ್ಟಣದಲ್ಲಿ ಅಭಿಯಾನ ಮಾಡಲಾಯಿತು ಹಾಗೂ ಪಕ್ಷದ ಮುಖಂಡರು ಇನ್ನಿತರ ಪದಾಧಿಕಾ-ರಿಗಳು , ಬೂತ್ ಅಧ್ಯಕ್ಷರು ಮತ್ತು ಬಿಜೆಪಿ ಕಾರ್ಯಕರ್ತರು ಮನೆ ಮನೆ ಮಹಾ ಸಂಪರ್ಕ ಅಭಿಯಾನದಲ್ಲಿ ಭಾಗವಹಿಸಿದ್ದಾರೆ.

## ಎಸ್ ಡಿ ಎಮ್ ಸಿ ಅದ್ಯಕ್ಷರಾಗಿ ಮಲ್ಲಿಕಾರ್ಜುನ ಕೆ,ಉಪಾಧ್ಯಕ್ಷೆಯಾಗಿ ಶ್ರೀ ಮತಿ ಶಾರದಾ

o ನೈಜ್ಯ ದೇಸೆ ನ್ಯೂಸ್

**ಮಸ್ಕಿ: ಪಟ್ಟಣದಲ್ಲಿರುವ ಬಾಲಕಿಂ-ರ ಸರಕಾರಿ ಪ್ರೌಢ ಶಾಲೆಯಲ್ಲಿ ನೂತನವಾಗಿ ಎಸ್ ಡಿ ಎಂ ಸಿ ಅಧ್ಯಕ್ಷರು , ಉಪಾಧ್ಯಕ್ಷೆ,ಸದಸ್ಯರು ಸೇರಿ ಒಂಭತ್ತು ಜನ ಸದಸ್ಯರು ಆಯ್ಕೆ ಮಾಡಲಾಯಿತು. ಬಾಲಕಿಯರ ಸರಕಾರಿ ಪ್ರೌಢ ಶಾಲೆಯ ಕಛೇರಿಯಲ್ಲಿ ಬಹಳಷ್ಟು ಸರಳವಾಗಿ ಎಲ್ಲರ ಸಹಕಾರ ,ಒಪ್ಪಿಗೆಯಿಂದ ಅಧ್ಯಕ್ಷರಾಗಿ ಶ್ರೀ ಮಲ್ಲಿಕಾರ್ಜುನ ಕಾಸ್ಲಿ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಶಾರದಾ ಗಂಡ ಮಲ್ಲಿಕಾರ್ಜುನ ಸ್ವಾಮಿ, ಇನ್ನೂಳಿದ ಸದಸ್ಯರನ್ನು ಆಯ್ಕೆ ಮಾಡಲಾಯಿತು.**

ನಂತರ ಮಾತನಾಡಿದ ನೂತನ ಅದ್ಯಕ್ಷ ಮಲ್ಲಿಕಾರ್ಜುನ ಕಾಸ್ಲಿ ಶಾಲೆಯ ಅಭಿವೃದ್ಧಿ ಮತ್ತು ಒಳ್ಳೆಯ ಕಾರ್ಯಕ್ರಮವನ್ನು ಎಲ್ಲರ ಸಹಕಾರ



ಮಾಡಲಾಗುವುದು, ಜೊತೆಗೆ ಪಾಲಕರು ಪೋಷಕರು ಶಾಲೆಯ ಬೆಳವಣಿಗೆ ನಿಮ್ಮ ಜವಾಬ್ದಾರಿ ಕೂಡ ಅಗತ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಮುಖ್ಯ ಗುರುಗಳಾದ ಬಸಪ್ಪ ಎನ್ , ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ತಾಲೂಕ ಅಧ್ಯಕ್ಷ ಶ್ರೀ ಆರ್ ಕೆ ನಾಯಕ , ಯಮನೂರು ನಾಯಕ ಬುದ್ದಿನಿ, ವೆಂಕಟೇಶ್ ಟೈಲರ್, ದೇವಪ್ಪ ನಾಯಕ, ಮೌನೇಶ್ ನಗನೂರು, ವೆಂಕಟೇಶ್ ನಾಯಕ, ಜಕ್ಕಪ್ಪ ತುಗ್ಗಲದಿನ್ನಿ, ವೆಂಕಟೇಶ್ ಮಸ್ಕಿ, ಮಲ್ಲಯ್ಯ ಅಂಗಡಿ ಹಾಗೂ ಇನ್ನಿತರರು ಇದ್ದರು.

## ಸಾಹಿತ್ಯ ಸಿಂಚನ

### ನಗುವಿನ ಲೋಕ

ನಗು ಎಂದರೆ ಬದುಕಿನ ಬೆಳಕು,
ಮನದ ಕತ್ತಲೆಯ ಓಡಿಸುವ ಕಿರಣವು.
ನಗುವಿನ ಲೋಕವೇ ಸುಂದರ ತಾಣ,
ಅಲ್ಲಿ ಸಂತೋಷವೇ ಜೀವನದ ಗಾನ.

ನಗಿದ ಮುಖದಲ್ಲಿ ಸ್ನೇಹ ಅರಳುತ್ತದೆ,
ಪ್ರೀತಿಯ ಹೂವು ಮನದಲ್ಲಿ ಮೂಡುತ್ತದೆ.
ಚಿಕ್ಕ ನಗುವೊಂದು ನೋವನ್ನು ಮರೆಸುತ್ತದೆ,
ಹೊಸ ಭರವಸೆಯ ದಾರಿಯನ್ನು ತೋರಿಸುತ್ತದೆ.

ನಗುವು ಧನವಲ್ಲ, ಹಂಚಿದಷ್ಟು ಬೆಳೆಯುತ್ತದೆ,
ದುಃಖದ ಮೋಡವನ್ನೂ ದೂರ ಮಾಡುತ್ತದೆ.
ಕೋಪದ ಬೆಂಕಿಗೆ ಶಾಂತಿಯ ಮಳೆಯಾಗಿ,
ಜೀವನದ ಹಾದಿಯಲ್ಲಿ ಜೊತೆಯಾಗುತ್ತದೆ.

ನಗುವಿನ ಭಾಷೆಗೆ ಗಡಿಗಳಿಲ್ಲ,
ಅದರ ಸೌಂದರ್ಯಕ್ಕೆ ಅಳತೆಗಳಿಲ್ಲ.
ಮುಗುಳ್ನಗೆಯೊಂದು ಸಾವಿರ ಮಾತು
ಹೇಳುತ್ತದೆ,
ಮಾನವ ಹೃದಯಗಳನ್ನು ಒಂದಾಗಿಸುತ್ತದೆ.

ಪ್ರತಿ ದಿನ ನಗುವಿನಿಂದ ಆರಂಭವಾಗಲಿ,
ಪ್ರತಿ ಕ್ಷಣ ಸಂತೋಷದಿಂದ ಸಾಗಲಿ.
ನಗುವಿನ ಲೋಕದಲ್ಲಿ ಎಲ್ಲರೂ ನೆಲೆಸಿದರೆ,
ಭೂಮಿಯೇ ಸ್ವರ್ಗವಾಗಿ ಅರಳಲಿ.

–ಎ ಎನ್. ರಮೇಶ್. ಗುಬ್ಬಿ

## ಕಣ್ಮರೆಯಾಗುತ್ತಿರುವ ಕಲೆಗೆ ಮರುಜೀವ – ವಿದ್ಯಾರ್ಥಿಗಳ ಕೈಯಲ್ಲಿ ಜಾನಪದ ತೇರು:ಡಾ ಗೊಲ್ಲಹಳ್ಳಿ ಶಿವಪ್ರಸಾದ್

o ನೈಜ್ಯ ದೆಸೆ ನ್ಯೂಸ್

ಮಸ್ಕಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು ಇವರ ಸಹಯೋಗದಲ್ಲಿ ಮರಕಮದಿನ್ನಿ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂದು ಹಮ್ಮಿಕೊಂಡಿದ್ದ "ಜಾನಪದತೇರು. ವಿದ್ಯಾರ್ಥಿಗಳಿಗಾಗಿ" ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷರಾದ ಡಾ. ಗೊಲ್ಲಹಳ್ಳಿ ಶಿವಪ್ರಸಾದ್ ಅವರು, "ಜಾನಪದ ಕೇವಲ ಕಲೆಯಲ್ಲ, ಅದು ನಮ್ಮ ಬದುಕು, ನಮ್ಮ ಸಂಸ್ಕೃತಿಯ ಬೇರು. ಇಂದಿನ ಮೊಬೈಲ್ ಯುಗದಲ್ಲಿ ಮಕ್ಕಳು ನಮ್ಮ ನೆಲದ ಕಲೆಗಳಿಂದ ದೂರವಾಗುತ್ತಿದ್ದಾರೆ. ಜಾನಪದ ತೇರು ಕಾರ್ಯಕ್ರಮದ ಮೂಲಕ



ನಾವು ಜಾನಪದವನ್ನು ಮತ್ತೆ ಶಾಲೆಯ ಅಂಗಳಕ್ಕೆ ಕರೆತರುತ್ತಿದ್ದೇವೆ. ವಿದ್ಯಾರ್ಥಿಗಳಲ್ಲಿ ಜಾನಪದದ ಬಗ್ಗೆ ಅಭಿಮಾನ ಮೂಡಿದಾಗ ಮಾತ್ರ ನಮ್ಮ ಸಂಸ್ಕೃತಿ ಉಳಿಯುತ್ತದೆ" ಎಂದು ಹೇಳಿದರು.

"ರಾಯಚೂರು ಜಿಲ್ಲೆ ಜಾನಪದ ಕಲೆಗಳ ತವರೂರು. ಇಲ್ಲಿನ ಡೊಳ್ಳು, ಗೊರವರ ಕುಣಿತ, ಜೋಗತಿ ನೃತ್ಯಗಳನ್ನು ರಾಷ್ಟ್ರಮಟ್ಟದಲ್ಲಿ ಗುರುತಿಸಬೇಕು" ಎಂದು ಅವರು ತಿಳಿಸಿದರು. ಕಾರ್ಯಕ್ರಮದಲ್ಲಿ ಡೊಳ್ಳು ಕುಣಿತ, ವೀರಗಾಸೆ, ಗೊರವಯ್ಯನ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಪ್ರದರ್ಶನ ನೀಡಿ ವಿದ್ಯಾರ್ಥಿಗಳನ್ನು ರಂಜಿಸಿದರು.

ಅಕಾಡೆಮಿಯ ಸದಸ್ಯ ವಿಜಯಕುಮಾರ್ ಸೋನಾರೆ, ಸಂಚಾಲಕರಾದ ರಂಗಪ್ಪ ಮಾಸ್ಟರ್ ತಡಕಲ್, ಎನ್.,ಶ್ರೀ ಶಿವಕುಮಾರ್ ಶಾಸ್ತ್ರೀ ತಡಕಲ್, ಈರಯ್ಯ ಸ್ವಾಮಿ, ಶಾಲೆಯಹಿರಿಯ ಶಿಕ್ಷಕರಾದ ದೇವರಾಜ್ ಸರ್, ವೆಂಕಟೇಶ್ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷ ದೇವರಾಜ್ ನಾಯಕ,, ಶರಣಪ್ಪ ನಾಯಕ್,ಜಾನಪದ ಕಲಾವಿದರು, ಸದಸ್ಯರು ಮತ್ತು ಮಹಿಳಾ ಕಲಾವಿದರು ಹಾಗೂ ನೂರಾರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ದಿ.29ರಂದು ಸಾಮಾಜಿಕ ನಾಯಕ್ಕಾಗಿ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಪಟ್ಟಣ ಪಂಚಾಯತ್ ಮುಂದೆ ಧರಣಿ



o ನೈಜ್ಯ ದೆಸೆ ನ್ಯೂಸ್

ಕವಿತಾಳ: ಪಟ್ಟಣದ ಪಟ್ಟಣ ಪಂಚಾಯತಿ ಮುಂದೆ ವಿವಿಧ ಬೇಡಿಗೆಗಳ ಈಡೇರಿಕೆಗೆ ಆಗ್ರಹಿಸಿ ಅನಿಧಿಷ್ಟ ಧರಣಿಯನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು 'ಸಾಮಾಜಿಕ ನ್ಯಾಯಕ್ಕಾಗಿ ದಲಿತಪರ ಸಂಘಟನೆಗಳ ಒಕ್ಕೂಟ'ದ ಮುಖಂಡರು ತಿಳಿಸಿದ್ದಾರೆ. ಅವರು ಇಂದು ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ಕರೆದು ಮಾತನಾಡಿದರು.

'ಪಟ್ಟಣದ ಸರ್ವೆನ ಮಬರ್ 12.13.14ರಲ್ಲಿ ಮಾಲೀಕರ ಹೆಸರುಗಳನ್ನು ತೆಗೆದು ಹಾಕಿ ರಾಜ್ಯಪಾಲರ ಹೆಸರಿಗೆ ಮಾಡಬೇಕು, ಈ ಹಿಂದೆ ಹಿರಿಯ ಹೋರಾಟಗಾರರು ಅಮರಾಣಂತರ ಉಪವಾಸ ಸತ್ಯಾಗ್ರಹ ಸೇ–ರಿದಮಥೆ ಹಲವಾರು ಹೋರಾಟಗಳನ್ನು ಮಾಡಿ ಅಂದಿನ ಜಿಲ್ಲಾಧಿಕಾರಿಗಳಿಗೆ ಮನ ಮುಟ್ಟುವಂತೆ ಮಾಡಿ 1970–71ರ ದಶಕದಲ್ಲಿ ಎಲ್ಲಾ ಜಾತಿ ಬಡವರಿಗೆ ಹಕ್ಕುಪತ್ರಗಳ ವಿತರಣೆ ಮಾಡಿದ್ದರು,ಅಂದಿನಿಂದ ಇಂದಿನವರೆಗೆ ಆ ಸರ್ವೆ ನಂ ಮಾಲೀಕರ ಹೆಸರು ಇಂದಿಗೂ ಇದೆ, ಅವರು ಅಂದರೇ ಮಾಲಿಕರು ಹೆಸರು ಕೈ ಬಿಡಬೇಕು ಹಾಗೂ 2024 ರಿಂದ 26ರವರೆಗೆ ಭೂ ಸೇನಾ ನಿಗಮದಿಂದ ಮಾಡಿರುವ ಕಾಮಗಾರಿಗಳನ್ನು ಸಂಪುರ್ಣವಾಫಿ ವಿಕ್ಷೀಸಿ. ತನಿಖೆ ಕೈಗೊಳ್ಳಬೆಕು ಮತ್ತು ಕಳಪೆ ಕಾಮಗಾರಿ ಮಾಡಿರುವ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಕವಿತಾಳಸ ಆಶ್ರಯ (ಎನ್ ಎಸ್ ಬೋಸರಾಜು) ಕಾಲೋನಿಯ ಅಭಿವೃದ್ಧಿ ಕೈಗೊಳ್ಳಬೇಕು ಹಾಗೂ ಪಟ್ಟಣ ಸಮೀಪದ ಮಸ್ಕಿ ತಾಲ್ಲೂಕಿನ ಯಕ್ಲಾಸಪುರ ಹಾಗೂ ಪರಸಾಪೂರ ಗ್ರಾಮಗಳ ಹತ್ತಿರ ಸರ್ಕಾರಿ ಪರವಾನಿಗೆ ಇಲ್ಲದೆ ಅಕ್ರಮವಾಗಿ ತಯಾರಿಸುತ್ತಿರುವ ಇಟ್ಟಂಗಿ ಬಟ್ಟಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಮತ್ತು ಕವಿತಾಳ ಪಟ್ಟಣದ ಜನತೆಗೆ ಬೇಕಾಗಿರುವ ಮೂಲಭೂತ ಸೈಕರ್ಯ ಸೇರಿದಂತೆ ಇನ್ನು ಮುಂತಾದ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾಮಾಜಿಕ ನಾಯಕ್ಕಾಗಿ ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟ ಪಟ್ಟಣ ಪಂಚಾಯತಿ ಮುಂದೆ 29ರಂದು ಅನಿಧಿಧಷ್ಟಾವಧಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುತ್ತಿದೆ' ಎಂದು ಮುಖಂಡರಾದ ಈರಣ್ಣ ಕೆಳಗೇರಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರಾದ ಹುಚ್ಚಪ್ಪ ವಡವಟ್ಟಿ , ಅರಳಪ್ಪ ತುಪ್ಪದೂರು, ರಮೇಶ ಈರಬಗೇರಾ, ಹುಚ್ಚಪ್ಪ ಬುಳ್ಳಾಪೂರ, ಮೌನೇಶ ಬುಳ್ಳಾಪೂರ, ಬಸವರಾಜ್ ಕೆಳಗೇರಿ, ಫಕೀರಪ್ಪ ,ಲಾಳೆಪ್ಪ ಕಲಂಗೇರಾ, ಹುಸೇನ್ ಸಾಬ್ ಸೇರಿದಂತೆ ಇನ್ನಿರರು ಭಾಗವಹಿಸಿದ್ದರು.

## ಮಹಿಳಾ ಪೊಲೀಸ್ ಠಾಣೆ ಪೊಲೀಸರಿಂದ 2022ರಲ್ಲಿ ಕಾಣೆಯಾಗಿದ್ದ ತಾಯಿ ಮಗು ಪತ್ತೆ

o ನೈಜ್ಯ ದೆಸೆ ನ್ಯೂಸ್

ಬಳ್ಳಾರಿ: ಕಳೆದ 2002 ರ ಫೆ.6 ರಂದು ಕಾಣೆ ಯಾಗಿದ್ದ ನಗರದ ಬಿ.ರಾಜು ಎಂಬುವವರು ಪತ್ನಿ ಮತ್ತು ಮಗುವನ್ನು ಮಹಿಳಾ ಠಾಣೆಯ ಪೊಲೀಸರು ಪತ್ತೆಹಚ್ಚಿದ್ದಾರೆ.



ರಾಜು ನೀಡಿದ್ದ ದೂರನ್ನು ಪರಿಗಣಿಸಿ ಪೊಲೀಸರು. ತನಿಖೆ ಕೈಗೊಂಡಾಗ ಚಿತ್ರದುರ್ಗ ಜಿಲ್ಲೆ ಹೊಸದುರ್ಗದಲ್ಲಿ ಮಹಿಳೆ ಹಾಗೂ ಮಗುವನ್ನು ಪಿಐ ರಮೇಶ್ ಕುಲಕರ್ಣಿ ಮತ್ತವರ ತಂಡ ಪತ್ತೆ ಮಾಡಿದ್ದಾರೆ ಮಹಿಳೆ ಹಾಗೂ ಮಗುವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಗಿದೆ.

## ಎಸ್ಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿಯಾಗಿ ಲಿಂಗಪ್ಪ ಚೌವ್ಹಾಣ ನೇಮಕ

o ನೈಜ್ಯ ದೆಸೆ ನ್ಯೂಸ್

ಮಸ್ಕಿ: ಭಾರತೀಯ ಜನತಾ ಪಾರ್ಟಿಯಿಂದ ಲಿಂಗಪ್ಪ ಚೌವ್ಹಾಣ ಅವರನ್ನು ಎಸ್ಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿಯನ್ನಾಗಿ ಎಸ್ಸಿ ಮೋರ್ಚಾ ಜಿಲ್ಲಾ ಘಟಕದ



ಅಧ್ಯಕ್ಷ ಪಿ.ಯಲ್ಲಪ್ಪ ನೇಮಿಸಿ ಆದೇಶ ಹೊರಡಿದ್ದಾರೆ. ಎಸ್ಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿಯಾಗಿ ನೇಮಿಸಲು ಕಾರಣರಾದ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ಮಹಾದೇವಪ್ಪ ಮತ್ತು ಮಂಡಲ ಅಧ್ಯಕ್ಷರಿಗೆ ಹಾಗೂ ಪಕ್ಷದ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದರು.

# ರಕ್ತದಾನ ಶ್ರೇಷ್ಠ ದಾನವಾಗಿದೆ: ಸಿದ್ದಲಿಂಗ ಶ್ರೀ

o ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಿಸಿ ಅವರನ್ನು ಮುಖ್ಯವಾಹಿನಿಗೆ ತರಲು ಅಮ್ಮ ಫೌಂಡೇಶನ್ ದವರು ಮಾಡುತ್ತಿರುವ ಸಮಾಜಮುಖಿ ಕಾರ್ಯಗಳು ಎಲ್ಲರಿಗೂ ಮಾದರಿ ಯೋಗ್ಯವಾಗಿವೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಪೂಜ್ಯ ಸಿದ್ದಲಿಂಗ ದೇವರು ಹೇಳಿದರು. ಪಟ್ಟಣದಲ್ಲಿ ಶನಿವಾರ ಶ್ರೀ ಖಾಸ್ಗತೇಶ್ವರ ಜಾತ್ರೆ ನಿಮಿತ್ಯವಾಗಿ ಶ್ರೀ ಕಾಳಿಕಾದೇವಿ ದೇವಸ್ಥಾನದಲ್ಲಿ ಅಮ್ಮಾ ಫೌಂಡೇಶನ್( ರಿ), ವಿಶ್ವಕರ್ಮ ಸಮಾಜ, ವಿಜಯಪುರ ಜಿಲ್ಲಾ ಆಸ್ಪತ್ರೆ ರಕ್ತ ನಿಧಿ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ತಾಳಿಕೋಟಿ ಹಾಗೂ ಎಸ್ ಕೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಎನ್ ಸಿ ಸಿ ವಿಭಾಗದ ಸಹಯೋಗದಲ್ಲಿ ಹಮ್ಮಿಕೊಂಡ ಬೃಹತ್ ರಕ್ಷದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಜೀವನದಲ್ಲಿ ಸಾಕಷ್ಟು ದುಡ್ಡು ಗಳಿಸಬಹುದು ಆದರೆ ರಕ್ತವನ್ನು ಗಳಿಸಲು ಸಾಧ್ಯವಿಲ್ಲ, ರಕ್ತ ಉತ್ಪಾದಿಸುವ ಯಾವ ಫ್ಯಾಕ್ಟರಿಯೂ ಜಗತ್ತಿನಲ್ಲಿ ಇಲ್ಲ. ಅದನ್ನು ಇನ್ನೊಬ್ಬರ ದೇಹದಿಂದಲೇ



ತೆಗೆದುಕೊಳ್ಳಬೇಕು. ಈ ಉದ್ದೇಶಕ್ಕಾಗಿಯೇ ಅದನ್ನು ಜೀವದಾನಕ್ಕೆ ಸಮಾನವೆಂದು ಹೇಳಲಾಗಿದೆ. ಈ ಶಿಬಿರವನ್ನು ಮಾಡುವುದರ ಮೂಲಕ ಈ ಫೌಂಡೇಶನ್ ದವರು ಬಹಳ ದೊಡ್ಡ ಪುಣ್ಯದ ಕೆಲಸವನ್ನು ಮಾಡಿದ್ದಾರೆ ಅವರಿಗೆ ಖಾಸ್ಗ ಅಜ್ಜನ ಕೃಪೆ ಸದಾ ಇರಲಿ ಎಂದರು. ಆರೋಗ್ಯ ಇಲಾಖೆಯ ಮಲ್ಲನಗೌಡ ದ್ಯಾಪೂರ ಹಾಗೂ ಪುರಸಭೆ ಮಾಜಿ ಸದಸ್ಯ ಮುದುಕಪ್ಪ ಬಡಿಗೇರ ಮಾತನಾಡಿ ರಕ್ತದಾನ ಮಾಡುವುದ–ರಿಂದ ಆರೋಗ್ಯದ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ಬೀರುವುದಿಲ್ಲ ಇದ–ರಿಂದ ಆರೋಗ್ಯ ಮತ್ತಷ್ಟು ಸುಧಾರಿಸುತ್ತದೆ.

ನಿಯಮಿತವಾಗಿ ರಕ್ತದಾನ ಮಾಡುವುದರಿಂದ ಮನುಷ್ಯ ಸದಾ ಕ್ರಿಯಾಶೀಲನಾಗಿರುತ್ತಾನೆ ಆದ್ದರಿಂದ ಈ ಶಿಬಿರದಲ್ಲಿ ಎಲ್ಲರೂ ಸ್ವಯಂ ಪ್ರೇ–ರಿತರಾಗಿ ರಕ್ತದಾನ ಮಾಡಬೇಕು ಎಂದು ಕೇಳಿಕೊಂಡರು. ಅಮ್ಮಾ ಫೌಂಡೇಶನ್ ಅಧ್ಯಕ್ಷೆ ಬಸಮ್ಮಾ ಕೆ.ಮಣ್ಣೂರ ಅಧ್ಯಕ್ಷತೆ ವಹಿಸಿದ್ದರು. ಫೌಂಡೇಶನ್ ಕಾರ್ಯದರ್ಶಿ ಸುಮಂಗಲಾ ಕೋಳೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಸುಮಾರು 39 ಬಾರಿ ರಕ್ತದಾನವನ್ನು ಮಾಡಿದ ದೇವರಾಜ ದೇಸಾಯಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಿಬಿರದಲ್ಲಿ ಒಟ್ಟು 38 ಜನರು ಸ್ವಯಂ ಪ್ರೇ–ರಿತರಾಗಿ ರಕ್ತದಾನವನ್ನು ಮಾಡಿದರು.

ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲಾ ಆಸ್ಪತ್ರೆಯ ಡಾ.ಗೌರವ ಮಾನೆ, ಏನ್ ಸಿಸಿ ಮುಖ್ಯಸ್ಥ ಆರ್ ವಿ ಮಿಸ್ಕಿನ್, ಭೀಮನಗೌಡ ದ್ಯಾಪೂರ, ಶಶಿಧರ ಪಾಟೀಲ, ಬಸವರಾಜ ಅಗ್ನಿ, ಅಮ್ಮಾ ಫೌಂಡೇಶನ್ ಉಪಾಧ್ಯಕ್ಷೆ ಸುರೇಖಾ ಬಿಳೆಭಾವಿ, ಪದಾಧಿಕಾರಿಗಳಾದ ಸುರೇಖಾ ಸಲಾಂಕಿ, ಡಾ. ಅನೀತಾ ಸಜ್ಜನ, ಡಾ.ಗಂಗಾಂಬಿಕಾ ಪಾಟೀಲ, ರೇಣುಕಾ ಕಾರ್ಜೋಳ, ಗೀತಾ ಪತ್ತಾರ, ಚೆನ್ನಮ್ಮ ಕತ್ತಿ, ಗುರುಬಾಯಿ ಮಣ್ಣೂರ, ಲಿಂಗೇಶ ರೇವಣಸಿದ್ದಯ್ಯ, ಜ್ಯೋತಿಬಾ ಕೊಡಗೆ, ವಿಜಯಪುರ ಜಿಲ್ಲಾ ರಕ್ತ ನಿಧಿ ಕೇಂದ್ರದ ಸಿಬ್ಬಂದಿಗಳು ಹಾಗೂ ರಕ್ತದಾನಿಗಳು ಇದ್ದರು.

# ಧರ್ಮೇಂದ್ರ ಪ್ರಧಾನ್ ಖಾತೆಯನ್ನು ನುಂಗಿದ 'ಜಿರಲೆ', ಕೊನೆಗೂ ರಾಜೀನಾಮೆ ಸಲ್ಲಿಕೆ

o ನೈಜ್ಯ ದೆಸೆ ನ್ಯೂಸ್

ನವದೆಹಲಿ: ದೆಹಲಿಯ ಜಂತರ್ ಮಂತರ್‌ನಲ್ಲಿ 'ಕಾಕ್ರೋಚ್ ಜನತಾ ಪಾರ್ಟಿ' (ಅಎಕ) ನಡೆಸಿದ ಬೃಹತ್ ಪ್ರತಿಭಟನೆಗಳ ಬೆನ್ನಲ್ಲೇ ನೀಟ್ (ಓಇಇಖ) ಪ್ರಶ್ನೆಪತ್ರಿಕೆ ಸೋರಿಕೆ ವಿವಾದಕ್ಕೆ ಸಂಬಂಧಿಸಿದಂತೆ ಧರ್ಮೇಂದ್ರ ಪ್ರಧಾನ್ ಇಂದು ಶನಿವಾರ ಕೇಂದ್ರ ಶಿಕ್ಷಣ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಶುಕ್ರವಾರ ಕೇಂದ್ರ ಸಚಿವರಾದ ಜೆಪಿ ನಡ್ಡಾ ಮತ್ತು ಜಿತೇಂದ್ರ ಸಿಂಗ್ ಅವರನ್ನು ಭೇಟಿಯಾಗಿದ್ದ ಸಿಜೆಪಿ ವಕ್ತಾರರು ತಮ್ಮ 3 ಬೇಡಿಕೆಗಳನ್ನು ಸಲ್ಲಿಸಿದ್ದರು.

ಅದರಲ್ಲಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆಯೇ ಮೊದಲ ಮತ್ತು ಮುಖ್ಯವಾದ ಬೇಡಿಕೆಯಾಗಿತ್ತು. ಸಂಧಾನ ಮಾತುಕತೆಯ ವೇಳೆ ಉಳಿದ ಎರಡು ಬೇಡಿಕೆಗಳಿಗೆ ಕೂಡಲೇ ಒಪ್ಪಿಗೆ ಸೂಚಿಸಿದ್ದ ಕೇಂದ್ರ ಸಚಿವರು ಧರ್ಮೇಂದ್ರ ಪ್ರಧಾನ್





ರಾಜೀನಾಮೆ ಕುರಿತು ನಿರ್ಧಾರ ತೆಗೆದುಕೊಳ್ಳಲು ಶನಿವಾರ ಮಧ್ಯಾಹ್ನದವರೆಗೆ ಸಮಯ ಕೋರಿದ್ದರು. ಇದೀಗ ಕೊನೆಗೂ ಸಿಜೆಪಿ ಹಾಗೂ ಪ್ರತಿಭಟನಾಕಾರರ ಬೇಡಿಕೆಗೆ ಮಣಿದಿರುವ ಕೇಂದ್ರ ಸರ್ಕಾರ ಧರ್ಮೇಂದ್ರ ಪ್ರಧಾನ್ ಅವರಿಂದ ರಾಜೀನಾಮೆ ಪಡೆದಿದೆ. ಅಲ್ಲಿಗೆ, ನೀಟ್ ಪ್ರಶ್ನೆಪತ್ರಿಕೆ ಸೋ–ರಿಕೆ ವಿರೋಧಿಸಿ ಪ್ರತಿಭಟನೆ ಮಾಡುತ್ತಿರುವವರ ಎಲ್ಲ ಬೇಡಿಕೆಗಳೂ ಈಡೇರಿದಂತಾಗಿದೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಧರ್ಮೇಂದ್ರ ಪ್ರಧಾನ್, "ಜಂತರ್ ಮಂತರ್‌ನಲ್ಲಿ ಹಾಗೂ ದೇಶಾದ್ಯಂತ ಇರುವ ಪರಿಸ್ಥಿತಿಯ ಲಾಭವನ್ನು ದೇಶವಿರೋಧಿ ಶಕ್ತಿಗಳು ಪಡೆಯಬಾರದು. ದೇಶವು ಒಗ್ಗಟ್ಟಿನಿಂದ ಇರಬೇಕು. ಭಾರತದ ವಿದ್ಯಾರ್ಥಿಗಳು ಕಾನೂನು ಸಂಕಷ್ಟದಲ್ಲಿ ಸಿಲುಕಿಕೊಳ್ಳದೆ ತಮ್ಮ ಅಧ್ಯಯನ ಮತ್ತು ವೃತ್ತಿಜೀವನದ ಮೇಲೆ ಗಮನ ಹರಿಸಬೇಕು ಎಂಬ ಕಾರಣಕ್ಕಾಗಿ ನಾನು ಪ್ರಧಾನಮಂತ್ರಿಯವರಿಗೆ ನನ್ನ ರಾಜೀನಾಮೆಯನ್ನು ಸಲ್ಲಿಸಿದ್ದೇನೆ" ಎಂದು ತಿಳಿಸಿದ್ದಾರೆ.

ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಬಳಿಕ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿದ ಸಿಜೆಪಿ, "ಶಿಕ್ಷಣ ಸಚಿವರು ತಮ್ಮ ರಾಜೀನಾಮೆ ಸಲ್ಲಿಸಿದ್ದಾರೆ, ವಿದ್ಯಾರ್ಥಿ ಶಕ್ತಿಗೆ ಜಯವಾಗಲಿ" ಎಂದು ಬರೆದುಕೊಂಡಿದೆ.

ವರದಿ : ಜಿಲಾನಸಾಬ್ ಬಡಿಗೇರ್



## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಸೈಬರ್ ಸೆಕ್ಯುರಿಟಿ (Cyber Security)

ಸೈಬರ್ ಸೆಕ್ಯುರಿಟಿ (Cyber Security) ಎನ್ನುವುದು ಕಂಪ್ಯೂಟರ್‌ಗಳು, ಮೊಬೈಲ್‌ಗಳು, ನೆಟ್‌ವರ್ಕ್‌ಗಳು, ಸರ್ವರ್‌ಗಳು ಮತ್ತು ಡಿಜಿಟಲ್ ಮಾಹಿತಿಯನ್ನು ಸೈಬರ್ ದಾಳಿಗಳು, ಹ್ಯಾಕಿಂಗ್, ವೈರಸ್‌ಗಳು ಹಾಗೂ ಡೇಟಾ ಕಳ್ಳತನದಿಂದ ರಕ್ಷಿಸುವ ತಂತ್ರಜ್ಞಾನವಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಅತ್ಯಂತ ಬೇಡಿಕೆಯಿರುವ ವೃತ್ತಿಪರ ಕೋರ್ಸ್‌ಗಳಲ್ಲಿ ಇದು ಒಂದಾಗಿದೆ.

ಕೋರ್ಸ್‌ನಲ್ಲಿ ಕಲಿಯುವ ಪ್ರಮುಖ ವಿಷಯಗಳು

ನೆಟ್‌ವರ್ಕ್ ಸೆಕ್ಯುರಿಟಿ (Network Security)
ಎಥಿಕಲ್ ಹ್ಯಾಕಿಂಗ್ (Ethical Hacking)
ಕ್ರಿಪ್ಟೋಗ್ರಫಿ (Cryptography)
ವೆಬ್ ಅಪ್ಲಿಕೇಶನ್ ಸೆಕ್ಯುರಿಟಿ
ಕ್ಲೌಡ್ ಸೆಕ್ಯುರಿಟಿ (Cloud Security)
ಡಿಜಿಟಲ್ ಫರೆನ್ಸಿಕ್ೀ (Digital Forensics)
ಪೆನೆಟ್ರೇಷನ್ ಟೆಸ್ಟಿಂಗ್ (Penetration Testing)
ಮಾಲ್‌ವೇರ್ ವಿಶ್ಲೇಷಣೆ (Malware Analysis)
ಸೈಬರ್ ಕಾನೂನು ಮತ್ತು ಡೇಟಾ ಗೌಪ್ಯತೆ
ಇನ್ಸಿಡೆಂಟ್ ರೆಸ್ಪಾನ್ಸ್ (Incident Response)

ಬಳಸುವ ಪ್ರಮುಖ ಟೂಲ್ಸ್

Wireshark
Nmap
Metasploit Framework
Burp Suite
Nessus
Kali Linux
OWASP ZAP
John the Ripper
Hydra
Snort

ಅರ್ಹತೆ

ಡಿಪ್ಲೊಮಾ/ಸರ್ಟಿಫಿಕೇಟ್: ಖಖಐಅ ಅಥವಾ ಕಗಅ ನಂತರ
ಪದವಿ: 12ನೇ ತರಗತಿ (ವಿಜ್ಞಾನ/ವಾಣಿಜ್ಯ/ಕಲೆ)
ಸ್ನಾತಕೋತ್ತರ: ಃಅಂ, ಃ.ಖಛಿ, ಃಇ/ಃ.ಖಿಜಛಿ, ಒಅಂ ಅಥವಾ ಸಂಬಂಧಿತ ಪದವಿ
ಕಂಪ್ಯೂಟರ್ ಮತ್ತು ಇಂಗ್ಲಿಷ್‌ನ ಮೂಲಭೂತ ಜ್ಞಾನ ಇದ್ದರೆ ಕಲಿಯಲು ಅನುಕೂಲ.

ಕೋರ್ಸ್ ಅವಧಿ

ಸರ್ಟಿಫಿಕೇಟ್: 3?6 ತಿಂಗಳು
ಡಿಪ್ಲೊಮಾ: 6?12 ತಿಂಗಳು
ಪದವಿ: 3?4 ವರ್ಷ
ಸ್ನಾತಕೋತ್ತರ: 2 ವರ್ಷ

ಪ್ರಮುಖ ಪ್ರಮಾಣಪತ್ರಗಳು (Certifications)

CEH (Certified Ethical Hacker)
CompTIA Security+
CISSP
CISM
CHFI
OSCP

ಉದ್ಯೋಗಾವಕಾಶಗಳು

Cyber Security Analyst
Ethical Hacker
Penetration Tester
Security Engineer
Security Operations Center (SOC) Analyst
Information Security Analyst
Digital Forensics Expert
Incident Response Analyst
Cloud Security Engineer
Cyber Security Consultant

ಉದ್ಯೋಗ ನೀಡುವ ಪ್ರಮುಖ ಕ್ಷೇತ್ರಗಳು

ಐಟಿ ಕಂಪನಿಗಳು
ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು
ಸರ್ಕಾರಿ ಇಲಾಖೆಗಳು
ರಕ್ಷಣಾ ಸಂಸ್ಥೆಗಳು
ಇ–ಕಾಮರ್ಸ್ ಕಂಪನಿಗಳು
ಆಸ್ಪತ್ರೆಗಳು
ಟೆಲಿಕಾಂ ಕಂಪನಿಗಳು
ಬಹುರಾಷ್ಟ್ರೀಯ ಸಂಸ್ಥೆಗಳು (MNCs)

ವೇತನ

ಆರಂಭಿಕ ಹಂತ: ?3 ಲಕ್ಷ??6 ಲಕ್ಷ ವಾರ್ಷಿಕ
2?5 ವರ್ಷ ಅನುಭವ: ?6 ಲಕ್ಷ12 ಲಕ್ಷ ವಾರ್ಷಿಕ
ಅನುಭವಿಗಳಿಗಾಗಿ: ?12 ಲಕ್ಷ30 ಲಕ್ಷ ಅಥವಾ ಅದಕ್ಕಿಂತ ಹೆಚ್ಚು (ಕೌಶಲ್ಯ ಮತ್ತು ಸಂಸ್ಥೆಯ ಆಧಾರದ ಮೇಲೆ)

ಕನ್ನಡದಲ್ಲಿ ಕಲಿಯಲು ಲಭ್ಯವಿರುವ ಕೆಲವು ವೇದಿಕೆಗಳು

GUVI LearnoVita
YouTube ಕನ್ನಡ ತಾಂತ್ರಿಕ ಚಾನೆಲ್‌ಗಳು
ವಿವಿಧ ಆನ್‌ಲೈನ್ ಲರ್ನಿಂಗ್ ಪ್ಲಾಟ್‌ಫಾರ್ಮ್‌ಗಳು

ಅಗತ್ಯ ಕೌಶಲ್ಯಗಳು

ಸಮಸ್ಯೆ ಪರಿಹರಿಸುವ ಸಾಮರ್ಥ್ಯ
ಲಿನಕ್ಸ್ ಹಾಗೂ ನೆಟ್‌ವರ್ಕಿಂಗ್ ಜ್ಞಾನ ಪ್ರೋಗ್ರಾಮಿಂಗ್ (Python, C, JavaScript ಮುಂತಾದವು)
ವಿಶ್ಲೇಷಣಾತ್ಮಕ ಚಿಂತನೆ
ನಿರಂತರವಾಗಿ ಹೊಸ ತಂತ್ರಜ್ಞಾನಗಳನ್ನು ಕಲಿಯುವ ಆಸಕ್ತಿ ಭವಿಷ್ಯದ ಅವಕಾಶಗಳು

ಡಿಜಿಟಲ್ ವ್ಯವಹಾರಗಳು ಮತ್ತು ಆನ್‌ಲೈನ್ ಸೇವೆಗಳು ವೇಗವಾಗಿ ಬೆಳೆಯುತ್ತಿರುವುದರಿಂದ ಸೈಬರ್ ಸೆಕ್ಯುರಿಟಿ ತಜ್ಞರ ಬೇಡಿಕೆ ಭಾರತದಲ್ಲಿಯೂ ಜಾಗತಿಕ ಮಟ್ಟದಲ್ಲಿಯೂ ನಿರಂತರವಾಗಿ ಹೆಚ್ಚುತ್ತಿದೆ. ಸರಿಯಾದ ತರಬೇತಿ ಮತ್ತು ಪ್ರಮಾಣಪತ್ರಗಳನ್ನು ಪಡೆದರೆ ಉತ್ತಮ ವೇತನದ ಉದ್ಯೋಗಗಳ ಜೊತೆಗೆ ಫ್ರೀಲಾನ್ಸಿಂಗ್ ಹಾಗೂ ಕನ್ಸಲ್ಟಿಂಗ್ ಅವಕಾಶಗಳೂ ಲಭ್ಯವಿವೆ.




## ಪರವಾನಿಗೆ ಇಲ್ಲದೆ ಬೀಜ ಗೊಬ್ಬರ ಮಾರಾಟ, ಮಳಿಗೆಗಳಿಗೆ ಅಧಿಕಾರಿಗಳು ಬೇಟಿ ನೀಡಿ ಪರಿಶೀಲನೆ

o ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಬೆಳಗಿನ ಜಾವ ಕೃಷಿ ಅಧಿಕಾರಿಗಳು ಮತ್ತು ಕಲ್ಯಾಣ ಕರ್ನಾಟಕ ನ್ಯೂಸ್ ಚಾನೆಲ್ ತಂಡದಿಂದ ನಗರದ ಹೊರವಲಯದ ಸೈಯದ್ ಚಿಂಚೋಳಿ ರಸ್ತೆಯಲ್ಲಿ ಇರುವ ತರಕಾರಿ ಮಾರುಕಟ್ಟೆಯಲ್ಲಿ ಪರವಾನಿಗೆ ಇಲ್ಲದೆ ಬೀಜ ಗೊಬ್ಬರ ಮಳಿಗೆಗಳಿಗೆ ದಿಢೀರ್ ಬೇಟಿ ನೀಡಿ ಪರಿಶೀಲನೆ ಮಾಡಿದರು.**

ಯಾವುದೇ ಪರವಾನಿಗೆ ಇಲ್ಲದೆ ಬೀಜ ಗೊಬ್ಬರ ಮತ್ತು ಕೀಟನಾಶಕ ಪದಾರ್ಥಗಳು ಮಾರಾಟ ಮಾರುವುದು ಗಮನಕ್ಕೆ ಬಂದಿದ್ದು ಅಧಿಕಾರಿಗಳು ಅದನ್ನು ವಶಕ್ಕೆ ಪಡೆದುಕೊಂಡರು ಪದಾರ್ಥಗಳು ಸಾವಿರಾರು ರೂಪಾಯಿ ಮೌಲ್ಯದ್ದು ವಶಕ್ಕೆ ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು,



ಅಧಿಕಾರಿಗಳು ಕಳೆದ ತಿಂಗಳಲ್ಲಿ ಎಲ್ಲ ಮಾರಾಟ ಮಳಿಗೆಗಳಿಗೆ ಪರವಾನಿಗೆ ಪಡೆಯಲು ಮಾಹಿತಿ ನೀಡಿತ್ತು ಆದ–ʼರೆ ಇನ್ನು ಹಲವು ಜನ ಪಡೆದಿರುವುದಿಲ್ಲ, ರೈತರ ಪರವಾನಿಗೆ ಪಡೆದ ಮಳಿಗೆಗಳಲ್ಲಿ ಮಾತ್ರ ಬೀಜ ಗೊಬ್ಬರ ಮತ್ತು ಕೀಟನಾಶಕ ಖರೀದಿ ಮಾಡಬೇಕು ಎಂದು ಅಧಿಕಾರಿಗಳು ತಿಳಿಸಿದರು

## ಇನ್ನರ್‌ವೀಲ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ

o ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ:ಪಟ್ಟಣದ ಬಸವ ಭವನದಲ್ಲಿ ಇನ್ನರ್‌ವೀಲ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಶನಿವಾರ ನಡೆಯಿತು.**

**ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕ್ಲಬ್ ಅಧ್ಯಕ್ಷೆ ಗೌರಮ್ಮ ಕುಡತಿನಿ, ಸದಸ್ಯರ ಸಹಕಾರ ಮತ್ತು ಸಕ್ರಿಯ ಭಾಗವಹಿಸುವಿಕೆಯಿಂದ ಕ್ಲಬ್ ಉತ್ತಮವಾಗಿ ಬೆಳೆಯಲು ಸಾಧ್ಯವಾಗಿದೆ.**

ಮುಂದೆಯೂ ಸಮಾಜಮುಖಿ ಸೇವಾ ಚಟುವಟಿಕೆಗಳಿಗೆ ಹೆಚ್ಚಿನ ಆದ–ʼ್ಯತೆ ನೀಡಲಾಗುವುದು ಎಂದು ಹೇಳಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ವೇದಾ ಪಾಟೀಲ್ ಮಾತನಾಡಿ, ಉತ್ತಮ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ಗುಣಮಟ್ಟದ ಆಹಾರ ಸೇವಿಸುವುದರ




ಜೊತೆಗೆ ಆರೋಗ್ಯದ ಬಗ್ಗೆ ನಿರಂತರ ಕಾಳಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಶ್ರೀದೇವಿ ಮಸ್ಕಿಮಠ, ಡಾ. ಪಾರ್ವತಿ ಪಳ್ಳೋಟಿ, ಪ್ರಿಯಾಂಕ ದೊಡ್ಡಬಸವನಗೌಡ ಬಯ್ಯಾಪುರ, ಪ್ರಭಾ ಬಂಗಾರಶೆಟ್ಟರ್, ಗಿರಿಜಾ ಮಾಲಿ ಪಾಟೀಲ್, ಶಾರದಾ ಶೆಟ್ಟರ್, ಕಾವೇರಿ ಕುಂದರಗಿ, ವಂದನಾ ಗೋಗಿ, ಮೇಘಾ ದೇಸಾಯಿ, ಡಾ. ಕುಮುದಾ ಪಲ್ಲೇದ್ ಸೇರಿದಂತೆ ಕ್ಲಬ್‌ನ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಮುಂದಿನ ಆದೇಶದವರೆಗೆ ದೆಹಲಿಯಲ್ಲಿ ಪೆಲೆಟ್ ಗನ್‌ಗಳು, ಎಲೆಕ್ಟ್ರಿಕ್ ಶಾಕ್ ಲಾಠಿಗಳ ಬಳಕೆ ಸಂಪೂರ್ಣ ನಿಷೇಧ

o ನೈಜ್ಯ ದೆಸೆ ನ್ಯೂಸ್

**ನವದೆಹಲಿ: ನವದೆಹಲಿಯ ಜಂತರ್ ಮಂತರ್‌ನಲ್ಲಿ ಇತ್ತೀಚೆಗೆ ನಡೆದ ಪ್ರತಿಭಟನೆಯ ವೇಳೆ ಕ್ಷಿಪ್ರ ಕಾರ್ಯಪಡೆ ಕರ್ತವ್ಯ ನಿರ್ವಹಣೆಯಲ್ಲಿ ಗಂಭೀರ ಲೋಪಗಳು ಹಾಗೂ ಕಾರ್ಯಾಚರಣೆಯ ನ್ಯೂನತೆಗಳು ಕಂಡುಬಂದ ಹಿನ್ನೆಲೆಯಲ್ಲಿ, ಸಿಆರ್‌ಪಿಎಫ್ ಮತ್ತು ಆರ್‌ಎಎಫ್ ಆಡಳಿತವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.**

ಮುಂದಿನ ಆದೇಶದವರೆಗೆ ರಾಷ್ಟ್ರ ರಾಜಧಾನಿಯಲ್ಲಿ ನಡೆಯುವ ಪ್ರತಿಭಟನೆ ಹಾಗೂ ಜನಸಂದಣಿ ನಿಯಂತ್ರಣದ ವೇಳೆ ಪೆಲೆಟ್ ಗನ್‌ಗಳು, ಎಲೆಕ್ಟ್ರಿಕ್ ಶಾಕ್ ಲಾಠಿಗಳು ಮತ್ತು ಮಾರಕವಲ್ಲದ ಆಯುಧಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಜುಲೈ 20 ರಂದು ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯ ನಿರ್ವಹಣೆಯಲ್ಲಿ ಭಾರೀ ಲೋಪಗಳು ಎದುರಾಗಿದ್ದವು. ಈ ಕುರಿತು ಜುಲೈ 22




ರಂದು ಇನ್ಸ್‌ಪೆಕ್ಟರ್ ಜನರಲ್ ಸೀಮಾ ಧುಂಡಿಂ–ಯಾ ಅವರ ಅಧ್ಯಕ್ಷತೆಯಲ್ಲಿ ಹಿರಿಯ ಆರ್‌ಎಎಫ್ ಅಧಿಕಾರಿಗಳ ವೀಡಿಯೊ ಸಮ್ಮೇಳನ ನಡೆಯಿತು.

ಈ ಸಭೆಯಲ್ಲಿ ಪೊಲೀಸ್ ಪಡೆಯ ಪಾತ್ರದ ಬಗ್ಗೆ ಗಂಭೀರ ಆತಾವಲೋಕನ ನಡೆಸಲಾಗಿದ್ದು, ಕರ್ತವ್ಯದಲ್ಲಿ ಎಸಗಿದ ಎಡವಟ್ಟುಗಳನ್ನು ಒಪ್ಪಿಕೊಳ್ಳಲಾಗಿದೆ. ಅಲ್ಲದೆ, ಜನಸಂದಣಿ ನಿಯಂತ್ರಣ, ಶಿಸ್ತು ಹಾಗೂ ಹೊಣೆಗಾರಿಕೆಯನ್ನು ಸುಧಾರಿಸುವ ನಿಟ್ಟಿನಲ್ಲಿ 26 ಪ್ರಮುಖ ಸರಿಪಡಿಸುವ ಕ್ರಮಗಳನ್ನು ಘೋಷಿಸಲಾಗಿದೆ.

**ಆಯುಧಗಳ ನಿಷೇಧ :**

ಮುಂದಿನ ಸೂಚನೆ ಬರುವವರೆಗೆ ಪ್ರೊಜೆಕ್ಟೈಲ್ ಅಟ್ಯಾಕ್ ಗನ್‌ಗಳು, ಆ?ಯಂಟಿ–ಗಲಭೆ ಗನ್‌ಗಳು, ಎಲೆಕ್ಟ್ರಿಕ್ ಶಾಕ್ ವೆಪನ್‌ಗಳು ಮತ್ತು ಎಲೆಕ್ಟ್ರಿಕ್ ಶೀಲ್?ಡಗಳ ಬಳಕೆ ಹಾಗೂ ನಿಯೋಜನೆಯನ್ನು ದೆಹಲಿಯಲ್ಲಿ ನಿಷೇಧಿಸಲಾಗಿದೆ.ಪ್ರತಿ ಕಾರ್ಯಾಚರಣೆಯ ಸಂದರ್ಭದಲ್ಲಿ ಸಿಬ್ಬಂದಿ ಕಡ್ಡಾಯವಾಗಿ ಬಾಡಿ–ವಾರ್ನ್ ಕ್ಯಾಮೆರಾಗಳನ್ನು ಧರಿಸಬೇಕು. ಪ್ರಮುಖ ಘಟನೆಗಳ ವಿಶೇಷ ವೀಡಿಯೊಗ್ರಫಿ ಹಾಗೂ ಗುಪ್ತಚರ ಮೇಲ್ವಿಚಾರಣೆಯನ್ನು ಬಲಪಡಿಸಲು ಸೂಚಿಸಲಾಗಿದೆ. ಜನಸಂದಣಿಯಿಂದ ದೂರ ಸರಿದ ವ್ಯಕ್ತಿಗಳ ಮೇಲೆ ಬಲಪ್ರಯೋಗ ಮಾಡುವುದು, ಉದ್ದೇಶಪೂರ್ವಕವಾಗಿ ಜನರನ್ನು ನೆಲಕ್ಕೆ ತಳ್ಳುವುದು ಮತ್ತು ಬ್ಯಾರಿಕೇಡ್‌ಗಳ ಹೊರಗೆ ನಿಂತವರನ್ನು ಹೊಡೆಯುವುದನ್ನು ಸಭೆಯು ತೀವ್ರವಾಗಿ ಖಂಡಿಸಿದೆ.

ಆರ್‌ಎಎಫ್ ಪರಿವರ್ತನಾ ತರಬೇತಿಯನ್ನು ಪಡೆಯದ ಸಿಬ್ಬಂದಿಯನ್ನು ಇನ್ನು ಮುಂದೆ ಯಾವುದೇ ಕಾರಣಕ್ಕೂ ಜನಸಂದಣಿ ನಿಯಂತ್ರಣ ಕರ್ತವ್ಯಕ್ಕೆ ನಿಯೋಜಿಸುವಂತಿಲ್ಲ. ತುರ್ತು ಪರಿಸ್ಥಿತಿಯಲ್ಲಿ ನಿಯೋಜಿಸಿದರೂ ಅವರಿಗೆ ಮೊದಲು ಕಾರ್ಯಾಚರಣೆಯ ಬಗ್ಗೆ ಸಂಪೂರ್ಣ ಬ್ರೀಫಿಂಗ್ ನೀಡಬೇಕು. ಜಮು ಮತ್ತು ಕಾಶೀರದಂತಹ ದಂಗೆ ನಿಗ್ರಹ ವಲಯಗಳಿಂದ ವರ್ಗಾವಣೆಗೊಂಡು ಬರುವ ಸಿಬ್ಬಂದಿಗಳಿಗೆ ಆರ್‌ಎಎಫ್‌ನ ಜನಸಂದಣಿ ನಿಯಂತ್ರಣ ತತ್ವಶಾಸ್ತ್ರ ಮತ್ತು ಸೂಕ್ಷ್ಮ ಪೊಲೀಸ್ ಕುರಿತು ತರಬೇತಿ ನೀಡುವವರೆಗೆ ಅವರನ್ನು ಪ್ರತಿಭಟನಾ ಸ್ಥಳಗಳಲ್ಲಿ ನಿಯೋಜಿಸಬಾರದು. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವೀಡಿಯೊಗಳಲ್ಲಿ ಕೆಲ ಆರ್‌ಎಎಫ್ ಸಿಬ್ಬಂದಿ ಕಡ್ಡಾಯ ರಕ್ಷಣಾ ಪರಿಕರಗಳಾದ ಹೆಲ್ಮೆಟ್ ಮತ್ತು ಬಾಡಿ ಪ್ರೊಟೆಕ್ಟರ್‌ಗಳಿಲ್ಲದೆ ನಿರ್ವಹಿಸುತ್ತಿರುವುದು ಕಂಡುಬಂದಿದೆ.

ಇದಕ್ಕೆ ಉನ್ನತಾಧಿಕಾರಿಗಳು, ಭವಿಷ್ಯದಲ್ಲಿ ಪ್ರತಿ ಸಿಬ್ಬಂದಿಯೂ ಸರಿಯಾಗಿ ಅಳವಡಿಸಲಾದ ಹೆಲ್ಮೆಟ್ ವಿಸರ್‌ಗಳು ಹಾಗೂ ಸಂಪೂರ್ಣ ರಕ್ಷಣಾ ಕವಚಗಳನ್ನು ಧರಿಸುವುದನ್ನು ಕಡ್ಡಾಯಗೊಳಿಸಿದ್ದಾರೆ.ಜಂತರ್ ಮಂತರ್ ಘಟನೆಯು ಭದ್ರತಾ ಸಿಬ್ಬಂದಿಯ ಕಾರ್ಯ ವೈಖರಿಗೆ ಕನ್ನಡಿ ಹಿಡಿದಿದ್ದು, ಭವಿಷ್ಯದಲ್ಲಿ ಇಂತಹ ಅತಿರೇಕದ ಅಥವಾ ಅನಗತ್ಯ ಬಲಪ್ರಯೋಗಗಳು ಮರುಕಳಿಸದಂತೆ ತಡೆಯಲು ಆರ್‌ಎಎಫ್ ಆಡಳಿತ ಮಂಡಳಿಯು ಈ ಕಠಿಣ ಹೆಜ್ಜೆಗಳನ್ನು ಇಟ್ಟಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101